ಆ ನೋಟವನ್ನು ನೋಡಲು ಅನುಕೂಲವಾಗುವಂತೆ ಇಟ್ಟಿದ್ದೆ. ದಿನವೂ ಸರಿಸುಮಾರು ಹತ್ತು ಗಂಟೆಗಳ ಕಾಲ ಅಲ್ಲಿ ಕಳೆಯುತ್ತಿದ್ದೆ.

◆ ಹತ್ತು ಗಂಟೆ?

ಹೌದು, ನಾನು ಶ್ರಮಜೀವಿ. ನನಗದು ಖುಷಿಕೊಡುತ್ತದೆ. ಜನ ನಾನು ಮಹತ್ವಾಕಾಂಕ್ಷಿ ಅನ್ನುತ್ತಾರೆ. ಅದು ನಿಜವಿರಲೂಬಹುದು. ನನ್ನ ಕೆಲಸವನ್ನು ಪ್ರೀತಿಸುತ್ತೇನೆ. ಮಗುವೊಂದು ತನ್ನ ಬೊಂಬೆಗಳ ಜೊತೆ ಆಟವಾಡುವುದರಲ್ಲಿ ಖುಷಿಕಾಣುವಂತೆ ಮೇಜಿನಲ್ಲಿ ಕೂತು ಕೆಲಸಮಾಡುವುದರಲ್ಲಿ ನನಗೆ ಖುಷಿ ಸಿಗುತ್ತದೆ. ಅದು ಕೆಲಸವೇ ಆದರೂ ಅದೊಂದು ಆಟದ ಹಾಗೆ ಖುಷಿಕೊಡುತ್ತದೆ.

◆ ಒರ್ಹಾನ್, ನಿಮ್ಮ 'ನೇಮ್‌ಸೇಕ್' ಮತ್ತು 'ಸ್ನೋ' ಕಾದಂಬರಿಯ ನಿರೂಪಕ ತನ್ನನ್ನು ತಾನು ದಿನವೂ ಅದೇ ಸಮಯಕ್ಕೆ ಕೂರುವ ಗುಮಾಸ್ತನೆಂದು ಕರೆದುಕೊಳ್ಳುತ್ತಾನೆ. ನಿಮ್ಮ ಬರವಣಿಗೆಯ ಶಿಸ್ತು ಹೀಗೆಯೇ ಇದೆಯೇ?

ಟರ್ಕಿಯಲ್ಲಿ ಕವಿಗಳಿಗೆ ಬಹಳ ವಿಶೇಷವಾದ ಸ್ಥಾನವಿದೆ. ಕಾದಂಬರಿಕಾರನ, ಗುಮಾಸ್ತನ ಸ್ವಭಾವ ಕವಿ ಸ್ವಭಾವಕ್ಕೆ ವಿರುದ್ಧವಾದದ್ದು ಎನ್ನುವ ಅರ್ಥದಲ್ಲಿ ಹೇಳಿದೆ. ಟರ್ಕಿಯಲ್ಲಿ ಕವಿಯಾಗಿರುವುದು ಎಂದರೆ ಬಹಳ ಪ್ರಸಿದ್ಧಿ, ಗೌರವವನ್ನು ಪಡೆವ ವಿಷಯ. ಬಹಳಷ್ಟು ಒಟ್ಟೊಮನ್ ಸುಲ್ತಾನರು ಮತ್ತು ಆಡಳಿತಗಾರರು ಕವಿಗಳಾಗಿದ್ದರು. ಅವರು ಇಂದು ನಾವು ಅರ್ಥಮಾಡಿಕೊಂಡಿರುವ ರೀತಿಯ ಕವಿಗಳಲ್ಲ. ನೂರಾರು ವರ್ಷಗಳವರೆಗೆ ಅದು ನೀವು ಬುದ್ಧಿಜೀವಿ ಎಂದು ತೋರಿಸಿಕೊಳ್ಳುವ ಕ್ರಮವಾಗಿತ್ತು. ಇವರಲ್ಲಿ ಬಹಳಷ್ಟು ಮಂದಿ ತಮ್ಮ ಕಾವ್ಯವನ್ನು ದಿವಾನ್ ಎಂದು ಕರೆಯಲಾಗುವ ಹಸ್ತಪ್ರತಿಯಲ್ಲಿ ಸಂಗ್ರಹಿಸಿಡುತ್ತಿದ್ದರು. ಒಟ್ಟೊಮನ್ ಆಸ್ಥಾನದ ಕಾವ್ಯವನ್ನು ದಿವಾನ್ ಕಾವ್ಯವೆಂದೇ ಕರೆಯಲಾಗುತ್ತಿತ್ತು. ಒಟ್ಟೊಮನ್ ಆಡಳಿತಗಾರರಲ್ಲಿ ಸುಮಾರು ಅರ್ಧದಷ್ಟು ಮಂದಿ ದಿವಾನ್ ಬರೆದಿದ್ದರು. ಹಲವು ನಿಯಮಗಳು ಮತ್ತು ಸಂಪ್ರದಾಯಗಳಿಗನುಸಾರವಾಗಿ ಬರೆಯಲಾಗುತ್ತಿದ್ದ ಬಹಳ ನಾಜೂಕಿನ ಬರವಣಿಗೆಯ ವಿಧಾನವಾಗಿತ್ತು. ಬಹಳ ಸಂಪ್ರದಾಯನಿಷ್ಠವಾಗಿತ್ತು. ಬಹಳಷ್ಟು ಪುನರಾವರ್ತನೆಗಳಿರುತ್ತಿದ್ದವು. ಪಾಶ್ಚಾತ್ಯ ಐಡಿಯಾಗಳು ಟರ್ಕಿಯನ್ನು ಪ್ರವೇಶಿಸಿದ ಮೇಲೆ ಕವಿಯೆಂದರೆ ಸತ್ಯಕ್ಕಾಗಿ ತನ್ನನ್ನೇ ತೆತ್ತುಕೊಂಡವನು ಎನ್ನುವ ರೊಮ್ಯಾಂಟಿಕ್ ಆದ ಆಧುನಿಕ ಐಡಿಯಾ ಹಳೆಯದರೊಂದಿಗೆ ಸೇರಿ ಹೊಸ ರೂಪ ಪಡೆಯಿತು. ಇದು ಕವಿಯ ಗೌರವವನ್ನು ಮತ್ತೂ ಹೆಚ್ಚಿಸಿತು. ಮತ್ತೊಂದೆಡೆ ಕಾದಂಬರಿಕಾರನೆಂದರೆ ತನ್ನ ಹಾದಿಯನ್ನು ಇರುವೆಯಂತೆ ಬಹಳ ನಿಧಾನವಾಗಿ ತಾಳ್ಮೆಯಿಂದ ಕ್ರಮಿಸುವವನು. ಕಾದಂಬರಿಕಾರ ತನ್ನ ದೈತ್ಯ ಶಕ್ತಿಯಿಂದಾಗಲಿ ರೊಮ್ಯಾಂಟಿಕ್ ದರ್ಶನದಿಂದಾಗಲಿ ನಮ್ಮನ್ನು ಪ್ರಭಾವಿಸುವುದಿಲ್ಲ. ಆತ ತಾಳ್ಮೆಯಿಂದ ನಮ್ಮನ್ನು ಸೆಳೆಯುತ್ತಾನೆ.

◆ ನೀವು ಎಂದಾದರೂ ಕವಿತೆಗಳನ್ನು ಬರೆದಿರುವಿರಾ?

ಈ ಪ್ರಶ್ನೆಯನ್ನು ಯಾವಾಗಲೂ ಕೇಳುತ್ತಾರೆ. ಹದಿನೆಂಟನೇ ವಯಸ್ಸಿನಲ್ಲಿ ಟರ್ಕಿ ಭಾಷೆಯಲ್ಲಿ ಕೆಲವು ಪದ್ಯಗಳನ್ನು ಬರೆದು ಪ್ರಕಟಿಸಿದ್ದೆ. ಆಮೇಲೆ ಬಿಟ್ಟುಬಿಟ್ಟೆ. ಕವಿಯ ಮೂಲಕ ದೇವರು ಮಾತಾಡುತ್ತಾನೆ ಅಂತ ನನಗನ್ನಿಸುತ್ತೆ. ಕವಿತೆ ನಿಮ್ಮನ್ನಿಡಿಯಾಗಿ ಆವರಿಸಿಕೊಂಡಿರಬೇಕು. ಕವಿತೆ ಬರೆಯಲು ಪ್ರಯತ್ನಿಸಿದೆ. ಸ್ವಲ್ಪ ಸಮಯದ ಅನಂತರ ದೇವರು ನನ್ನೊಂದಿಗೆ ಮಾತಾಡುತ್ತಿಲ್ಲ ಎಂದು ನನಗರ್ಥವಾಯಿತು. ಹೀಗಾಯಿತಲ್ಲ ಅಂತ ಬೇಜಾರಾಯಿತು. ಆಮೇಲೆ ಒಂದು ವೇಳೆ